<u>ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ</u>

<u>ನ್ಯಾಯಾಲಯ, ಆಲೂರು.</u>

**ಸಿ.ಸಿ.ಸಂಖ್ಯೆ: 597/16**

| | | |
|---|---|---|
| ಸಾಕ್ಷಿದಾರರ ಹೆಸರು | ರಂಗನಾಥ | ಸಿ.ಡಬ್ಲ್ಯೂ: 5 |
| ಗಂಡನ / ತಂದೆ ಹೆಸರು | ನಾಗರಾಜ್ | ಪಿ.ಡಬ್ಲ್ಯೂ: 1 |
| ವಯಸ್ಸು | 51 ವರ್ಷ | |
| ಉದ್ಯೋಗ | ವೈದ್ಯರು | |
| ವಾಸಸ್ಥಳ | ಹಾಸನ | |

ಪ್ರಮಾಣ ವಚನ ಬೋಧಿಸಲಾಯಿತು.

ದಿಃ 09.01.2026

**ಮುಖ್ಯ ವಿಚಾರಣೆಃ ಸಸಅ ರಿಂದ**

2012 ರಿಂದ ಆಲೂರು ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದೇನೆ. ದಿ.23.03.2016 ರಂದು ಚಾಸಾ 1 ರವರು ಬೆಳಗಿನ ಜಾವ 12.05 ಕ್ಕೆ ಹಲ್ಲೆ ಹಿನ್ನೆಲೆಯಲ್ಲಿ ಚಿಕಿತ್ಸೆಗಾಗಿ ಬಂದಿರುತ್ತಾರೆ. ಅವರನ್ನು ಪರಿಶೀಲಿಸಿದಾಗ ಎದೆಯ ಮುಂಭಾಗ ಮತ್ತು ಹೊಟ್ಟೆಯ ಮೇಲೆ ಹಲವಾರು ತರಚಿದ ಗಾಯ, ಕೈಕಾಲುಗಳ ಮುಂಭಾಗದಲ್ಲಿ 2-5 ಸೆ.ಮೀ. ಹಲವಾರು ತರಚಿದ ಗಾಯ ಕಂಡುಬಂದಿರುತ್ತದೆ. ಸದರಿ ಗಾಯವು ಸಾಮಾನ್ಯ ಸ್ವರೂಪ ಆಗಿರುತ್ತದೆ. ಸದರಿ ಗಾಯ ಕಬ್ಬಿಣದ ಚಾಕು ಮತ್ತು ರಾಡ್ ನಿಂದ ಹಲ್ಲೆ ಮಾಡಿದರೆ ಅಗುವ ಸಂಭವ ಇರುತ್ತದೆ. ಇದಕ್ಕೆ ಸಂಬಂಧಪಟ್ಟಂತೆ ನಾನು ಎಂ.ಎಲ್.ಸಿ ನೀಡಿರುತ್ತೇನೆ. ಗಾಯದ ಪ್ರಮಾಣ ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ 1 ಎಂದು ಸಾಕ್ಷಿ ಸಹಿಯನ್ನು

ನಿಪಿ 1ಎ ಎಂದು ಗುರುತಿಸಲಾಯಿತು. ಎಂ.ಎಲ್.ಸಿ. ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ 1 ಎಂದು ಸಾಕ್ಷಿ ಸಹಿಯನ್ನು ನಿಪಿ 1ಎ ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ರಾಡಿನಿಂದ ಹಲ್ಲೆ ಮಾಡಿದರೆ ಊತ ಮತ್ತು ನೀಲಿ ಕಟ್ಟಿರುವ ಗಾಯಗಳಾಗುವ ಸಂಭವ ಇರುತ್ತದೆ ಎಂದರೆ ಸರಿ. ಚಾಕುವಿನಿಂದ ಕುಯ್ದರೆ ಹರಿತ ಗಾಯವಾಗುತ್ತವೆ ಎಂದರೆ ಸಾಮಾನ್ಯವಾಗಿ ಆಗುತ್ತದೆ. ಒಬ್ಬ ವ್ಯಕ್ತಿ ಒರಟಾದ ನೆಲದ ಮೇಲೆ ಉರುಳಿದರೆ ನಿಪಿ 1 ರಲ್ಲಿರುವ ಗಾಯಗಳಾಗುವ ಸಂಭವ ಇರುತ್ತದೆ ಎಂದರೆ ಸರಿ. ನಿಪಿ 2 ರಲ್ಲಿ ಯಾರು ಹಲ್ಲೆ ಮಾಡಿರುತ್ತಾರೆ ಎಂಬುದರ ಬಗ್ಗೆ ನಮೂದಿಸಿರುವುದಿಲ್ಲ ಎಂದರೆ ಸರಿ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(ಸ್ನೇಹ ಎಂ.)
ವ್ಯವಹಾರ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ, ಆಲೂರು .